**Code No. 16 Y**

# ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರವೀಣ ದರ್ಜೆ — ದ್ವಿತೀಯ ಪತ್ರಿಕೆ

## ವಿಸ್ತರಿಸುವಿಕೆ

ಜೂನ್, 2016

ವೇಳೆ { ಉಕ್ತಲೇಖನ : 5 ನಿಮಿಷಗಳು
ವಿಸ್ತರಣೆ : 3 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರ ಶೀಘ್ರಲಿಪಿಯ ಟಿಪ್ಪಣಿಗಳನ್ನು ಅವಶ್ಯವಾಗಿರುವಂತೆ ಸರಿಯಾದ ನಮೂನೆಯಲ್ಲಿ ಸೂಕ್ತವಾಗಿ ವಿಸ್ತರಿಸಬೇಕೆಂದು ಸೂಚಿಸತಕ್ಕದ್ದು.
3) ಪ್ರಶ್ನಾಂಕಗಳು ವೇಗ ವಿಷಯದ ಭಾಗವಾಗಿರುವುದರಿಂದ ಅವುಗಳನ್ನು ಸ್ವಲ್ಪ **ಎತ್ತರಿಸಿದ ಧ್ವನಿಯಲ್ಲಿ** ಓದತಕ್ಕದ್ದು.
4) ಪ್ರತಿಯೊಂದು ಪ್ರಶ್ನೆಗೂ ನಿಗದಿಯಾಗಿರತಕ್ಕ ಅಂಕಗಳನ್ನು ಪ್ರಶ್ನೆಗಳ ಉಕ್ತಲೇಖನ ಕೊಡುವಾಗ ಓದಕೂಡದು. ಉಕ್ತಲೇಖನ ಮುಗಿದ ನಂತರ ಈ ಅಂಶಗಳನ್ನು ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು.

---

***ಪ್ರಶ್ನೆ ಒಂದು :*** ಆರ್ಥಿಕ ವರ್ಷದ ಅಂತ್ಯದೊಳಗಾಗಿ ಎಲ್ಲಾ ಇಲಾಖೆಗಳಿಂದ ಹೊರಡಿಸಲಾಗುವ ಪುಸಕ್ತ ಹೊಂದಾಣಿಕೆ ಆದೇಶಗಳನ್ನು ಸಂಗ್ರಹಿಸಿ ಮಹಾಲೇಖಪಾಲರ ಕಚೇರಿಗೆ ತಲುಪಿಸುವ ಕುರಿತು ನಡೆದ
$\frac{1}{4}$ ಸಮ್ಮೇಳನದ/ಲ್ಲಿ ಮಹಾಲೇಖಪಾಲರ ಕಚೇರಿಯಲ್ಲಿ ಹಾಗೂ ಆರ್ಥಿಕ ಇಲಾಖೆಯಲ್ಲಿ ಈ ವಿಷಯವನ್ನು ನೋಡಿಕೊಳ್ಳಲು ಒಬ್ಬ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಲಾಗಿತ್ತು. ಅದರಂತೆ ಸರ್ಕಾರದ ಅಧೀನ ಕಾರ್ಯದ/ದರ್ಶಿ $\frac{1}{2}$
(ಎಫ್‌ಆರ್ ಮತ್ತು ಬಿಸಿಸಿ) ಆರ್ಥಿಕ ಇಲಾಖೆ ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಆದ್ದರಿಂದ ಇನ್ನು ಮುಂದೆ ತಮ್ಮ ಇಲಾಖೆಯಲ್ಲಿ ಹೊರಡಿಸಲಾಗುವ ಎಲ್ಲಾ ಪುಸ್ತಕ ಹೊಂದಾಣಿಕೆ ಆದೇಶಗಳ ಪ್ರತಿಯನ್ನು/ $\frac{3}{4}$
ಮೇಲ್ಕಂಡ ನೋಡಲ್ ಅಧಿಕಾರಿಯವರಿಗೆ ಕಳುಹಿಸುವಂತೆ ಕೋರಲಾಗಿದೆ. ಅದೇ ರೀತಿ ಆರ್ಥಿಕ ಇಲಾಖೆಯಿಂದ ಹೊರಡಿಸಲಾಗುವ ಎಲ್ಲಾ ಪುಸ್ತಕ ಹೊಂದಾಣಿಕೆ ಆದೇಶಗಳನ್ನು ಸಹ

1 ಆರ್ಥಿಕ ಇಲಾಖೆಯ ಅಧೀನ ಕಾರ್ಯದರ್ಶಿX
ಯವರಿಗೆ ತಲುಪಿಸುವಂತೆ ಕೋರಲಾಗಿದೆ.

**ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರಿಂದ ಎಲ್ಲಾ ಅಪರ ಮುಖ್ಯ, ಪ್ರಧಾನ ಹಾಗೂ ಕಾರ್ಯದರ್ಶಿಗಳಿಗೆ ಹೊರಡಿಸಿದಂತೆ ಸುತ್ತೋಲೆಯನ್ನು ತಯಾರಿಸಿ.**

(ಅಂಕಗಳು : 20)

$\frac{1}{4}$ ***ಪ್ರಶ್ನೆ ಎರಡು :*** ಅಧ್ಯಕ್ಷರು, ಅ/ಖಿಲ ಭಾರತ
ವೀರಶೈವ ಸಹಕಾರ ಸಂಘ, ಬೆಂಗಳೂರು,
ಇವರು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದು,
ಸಂಸ್ಥೆಯ ವತಿಯಿಂದ ಬೆಂಗಳೂರಿನಲ್ಲಿ
ಉದ್ದೇಶಿತ ಹಣ್ಣು ಸಂಸ್ಕರಣ ಕೇಂದ್ರವನ್ನು
ಸ್ಥಾಪಿಸಲು ಹತ್ತು ಎಕರೆ ಜಮೀನಿನ
$\frac{1}{2}$ ಅ/ವಶ್ಯಕತೆಯಿದ್ದು, ಭಾರತ ಸರ್ಕಾರದಿಂದ
ಪರವಾನಗಿಯನ್ನು ಪಡೆದಿದ್ದು, ಹಣ್ಣುಗಳನ್ನು
ವಿದೇಶಗಳಿಗೆ ರಫ್ತು ಮಾಡಲಾಗುವುದೆಂದು
ತಿಳಿಸುತ್ತಾ, ಶ್ರೀಯುತರಿಗೆ ಜಮೀನು
ಮಂಜೂರು ಮಾಡಿದರೆ ಒಂದು ವರ್ಷದಲ್ಲಿ
$\frac{3}{4}$ ಕಾರ್ಖಾನೆಯ/ನ್ನು ಸ್ಥಾಪಿಸಿ ಉತ್ಪಾದನೆಯನ್ನು
ಪ್ರಾರಂಭ ಮಾಡುವ ಬಗ್ಗೆ ಪೂರ್ಣ ವರದಿಯನ್ನು
ಮಾನ್ಯ ಮುಖ್ಯಮಂತ್ರಿಗಳ ಅವಹಾಗನೆಗೆ
ಕಳುಹಿಸುವುದು.

**ಮೇಲ್ಕಂಡ ವಿಷಯಗಳೊಡನೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು**
**ಕೈಗಾರಿಕೆX ಇಲಾಖೆ, ವರಿಗೆ ಸರ್ಕಾರದ** 2
**ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರಿಂದ ಅರೆ ಸರ್ಕಾರಿ ಪತ್ರ ಬರೆಯಿರಿ.**

(ಅಂಕಗಳು : 20)

***ಪ್ರಶ್ನೆ ಮೂರು :*** ಕರ್ನಾಟಕ ವಿಧಾನ ಸಭೆ
ಚುನಾವಣೆ ಅಕ್ಟೋಬರ್ ಹದಿನೈದು ಎರಡು
ಸಾವಿರದ ಮೂರನೇ ಇ/ಸವಿ. ಮತದಾನ $\frac{1}{4}$
ಕ್ಷೇತ್ರ : ರಾಜಾಜಿನಗರ. ಸ್ಥಳ : ರಾಜಾಜಿನಗರ
ಹೈಸ್ಕೂಲ್, ಬೆಳಗ್ಗೆ ಎಂಟರಿಂದ ಸಂಜೆ ಐದು.
ಚಿಹ್ನೆ : ಸಿಂಹ. ಶ್ರೀ ನಾಗರಾಜ್, ಸ್ವತಂತ್ರ
ಅಭ್ಯರ್ಥಿ. ನಗರಸಭೆಯ ಸದಸ್ಯನಾಗಿ ಹಾಗೂ
ಅನೇಕ ಸಂಘ ಸಂಸ್ಥೆಗಳಲ್ಲಿ ಕೆ/ಲಸಗಳನ್ನು $\frac{1}{2}$
ಮಾಡಿದ ಅನುಭವ ಮತ್ತು ದೀನ ದಲಿತರ ಬಗ್ಗೆ
ಹಗಲಿರುಳು ಶ್ರಮಿಸಿದ್ದಾರೆ. ಚುನಾಯಿತರಾದರೆ
ಕ್ಷೇತ್ರದ ನೈರ್ಮಲ್ಯ ಕಾಪಾಡುವುದು,
ಕುಡಿಯುವ ನೀರಿನ ಪೂರೈಕೆ, ಸಾರ್ವಜನಿಕರ
ಒಳಿತಿಗಾಗಿ ಹೋರಾಟ ನ/ಡೆಸುವುದು, $\frac{3}{4}$
ವಿಧವೆಯರಿಗೆ ಮಾಸಾಶನ, ಕ್ಷೇತ್ರದಲ್ಲಿ ಇನ್ನಷ್ಟು
ಕೊಳವೆ ಬಾವಿಗಳ ನಿರ್ಮಾಣ, ರೈತರ
ಬೆಳೆಗಳಿಗೆ ಸರಿಯಾದ ಬೆಲೆ, ನಿರ್ಗತಿಕರಿಗೆ
ವಸತಿ ಸೌಲಭ್ಯ, ನಿರುದ್ಯೋಗಿಗಳಿಗೆ ಉದ್ಯೋಗ
ಕಲ್ಪಿಸುವುದು, ಎಲ್ಲಾ ಹಂXತದಲ್ಲೂ ಕನ್ನಡ 3
ಭಾಷೆಯನ್ನು ಜನಪ್ರಿಯಗೊಳಿಸುವುದು,

ರಾಷ್ಟ್ರದ ಕೈಗಾರಿಕೆ ಮತ್ತು ಆರ್ಥಿಕಾಭಿವೃದ್ಧಿಗೆ ಅತ್ಯುತ್ತಮ ಯೋಜನೆಗಳು, ನೈಸರ್ಗಿಕ ಸಂಪತ್ತುಗಳನ್ನು ಬಳಸಿ ಪ್ರಗತಿ ಸಾಧಿಸುವುದು.

$\frac{1}{4}$ ಅನಾವಶ್ಯಕ ವೆಚ್ಚ ತಗ್ಗಿಸು/ವುದು ಇನ್ನೂ ಹಲವಾರು ಕೆಲಸಗಳನ್ನು ಮಾಡುವುದು.

**ಚುನಾವಣಾ ಪ್ರಣಾಳಿಕೆ ತಯಾರಿಸಿ.**

(ಅಂಕಗಳು : 25)

**ಪ್ರಶ್ನೆ ನಾಲ್ಕು :** ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಜನ್ಮದಿನದ ಅಂಗವಾಗಿ ಏರ್ಪಡಿಸಿದ್ದ ರಾಷ್ಟ್ರೀಯ ಸಮಗ್ರತಾ

$\frac{1}{2}$ ಸಪ್ತಾ/ಹ ಕರ್ನಾಟಕದ ಮುಖ್ಯಮಂತ್ರಿಗಳಿಂದ ಉದ್ಘಾಟನೆ. ಅಧ್ಯಕ್ಷತೆ : ಪ್ರದೇಶ ಕಾಂಗ್ರೇಸ್ ಅಧ್ಯಕ್ಷರು. ಆಹ್ವಾನಿತರು : ಮಂತ್ರಿಗಳು ಮತ್ತು ಶಾಸಕರು, ಸಚಿವಾಲಯದ ನೌಕರರು. ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ

$\frac{3}{4}$ ಇತ್ತೀಚಿನ ಕೋಮು/ ಗಲಭೆಗಳಿಂದ ರಾಜ್ಯ ಹಾಗೂ ದೇಶದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗಿದ್ದು, ಎಲ್ಲರೂ ಜಾತಿ, ವರ್ಣಬೇಧ ಮರೆತು ರಾಷ್ಟ್ರದ ಅಭಿವೃದ್ಧಿಗೆ ಒಮ್ಮತದಿಂದ ದುಡಿಯಲು ಹಾಗೂ ರಾಷ್ಟ್ರದ ಏಕತೆ ಮತ್ತು

4 ಸಮಗ್ರತೆಯನ್ನು ಕಾಪಾಡಲು ಪ್ರXತಿಜ್ಞೆ ಮಾಡಬೇಕೆಂದರು.

**ಮೇಲಿನೊಂದಿಗೆ ಮಾನ್ಯ ಮಂತ್ರಿಯವರ ಉದ್ಘಾಟನಾ ಭಾಷಣ ತಯಾರಿಸಿ.**

(ಅಂಕಗಳು : 15)

**ಪ್ರಶ್ನೆ ಐದು :** ಸರ್ಕಾರವು ಕಬ್ಬು ಬೆಳೆಯನ್ನು ಪುನರ್‌ವಿಮರ್ಶಿಸಿ, ಸಕ್ಕರೆ ಕಾರ್ಖಾನೆಗಳು

ನೀಡುವ ಹಣ ಕೃಷಿ ವೆಚ್ಚಕ್ಕೆ ಸರಿಹೋ/ಗುತ್ತಿದ್ದು, $\frac{1}{4}$

ವರ್ಷ ವರ್ಷ ಕಬ್ಬು ಬೆಳೆಯುವವರ ಸಂಖ್ಯೆ ಜಾಸ್ತಿಯಾಗುತ್ತಿದ್ದು ಉತ್ಪಾದನಾ ವೆಚ್ಚವೂ ಸಹ ಜಾಸ್ತಿಯಾಗಿದೆ. ಸದ್ಯಕ್ಕೆ ನೀಡುತ್ತಿರುವ ಕಬ್ಬಿನ ಬೆಲೆ ತೀರಾ ಕಡಿಮೆ; ರಸಗೊಬ್ಬರಗಳ ಬೆಲೆ

ಏರಿಕೆ, ದಿನಗೂಲಿಗಳ ಅಭಾ/ವ, ಸಾಗಾಣಿಕ $\frac{1}{2}$

ವೆಚ್ಚದ ಏರಿಕೆ, ವಿದ್ಯುತ್ ಖರ್ಚು, ಕಬ್ಬು ಬೆಳೆಗಾರರನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ. ಪ್ರಸಕ್ತ ಟನ್ನಿಗೆ ನೀಡುತ್ತಿರುವ ಬೆಲೆ ಸಾವಿರ ರೂಪಾಯಿಗಳನ್ನು ಎರಡು ಸಾವಿರ

ರೂಪಾಯಿಗಳಿಗೆ ಏರಿಸುವಂತೆ ಹಾಗೂ ಕಬ್ಬು/ $\frac{3}{4}$

ಬೆಳೆಗಾರರಿಗೆ ನ್ಯಾಯ ದೊರಕಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರಾಮಾಣಿಕ ಪ್ರಯತ್ನ ನಡೆಸಲಿ.

**ಕಬ್ಬು ಬೆಳೆಗಾರ ಸಂಘ, ಮಂಡ್ಯ ಇವರಿಂದ ಸಂಪಾದಕರು, ವಿಜಯವಾಣಿ ದಿನಪತ್ರಿಕೆ ಇವರಿಗೆ**

**ಪತ್ರ ಬರೆಯಿರಿ.**X (ಅಂಕಗಳು : 20) 5